ಶ್ರೀ ಹೆಚ್. ಎಂ. ಚನ್ನಬಸಪ್ಪ — ಇದುವರೆಗೂ ಏನೂ ಕಾರ್ಯ ಮಾಡಲಿಲ್ಲ ಅಂತಲ್ಲಾ. ಇಷ್ಟು ದಿವಸಕ್ಕೆ ಹೀಗೀಗೆ ಕೆಲಸ ಆಗಬೇಕು ಎಂದು ಹುಕುಂ ಮಾಡತಕ್ಕದ್ದು ಇದೆ. ಆದರೆ ಮಧ್ಯೆ ಏನಾದರೂ ಅನೀರಿಕ್ಷಿತವಾದ ತೊಂದರೆಗಳು ಬಂದರೆ ಸ್ವಲ್ಪ ನಿಧಾನವಾಗುತ್ತದೆ. ಈ ಬಗ್ಗೆ ಹೇಳುವುದಾದರೆ ಮೊದಲು ೧೪-೨-೧೯೭೬ರಲ್ಲಿ ಈ ಅಣೆಯಿಂದ ೧೪೮೮ ಎಕರೆಗೆ ನೀರು ಕೊಡುವ ಸಲುವಾಗಿ ೧೪೮೮ ಲಕ್ಷ ೭೦ ಸಾವಿರ ರೂಪಾಯಿ ಸ್ಯಾಂಕ್ಷನ್ ಆಗಿತ್ತು. ಆದರೆ ಆದರ ಪ್ರಯೋಜನವನ್ನು ಮತ್ತಷ್ಟು ಹೆಚ್ಚಿಸಬೇಕು ಎಂದು ಹೇಳಿ ೧೯೭೬ರಲ್ಲಿ ಚೀಫ್ ಇಂಜನೀಯರ ಇನ್ ಸ್ಪೆಕ್ಟ ಮಾಡಿ ಅವರ ತಾಂತ್ರಿಕ ಸಲಹೆ ಮೇಲೆ ೧೦೦೮ ಎಕರೆಗೆ ನೀರು ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಇದಕ್ಕೆ ರಿವೈಸ್ಡ್ ಎಸ್ಟಿಮೇಟು ಮಾಡಿರುವುದು ೪ ಲಕ್ಷ ೬೯ ಸಾವಿರ ರೂಪಾಯಿ ಮತ್ತು ಇದರ ಕೆಲಸವನ್ನು ಹಿಂದಿನ ಕಂಟ್ರಾಕ್ಟದಾರರು ಯಾರು ಇದ್ದರೋ ಅವರಿಗೇನೇ ಸಪ್ಲಿಮೆಂಟಲ್ ಅಗ್ರಿಮೆಂಟ ಮಾಡಿ ಕೊಟ್ಟಿದೆ. ಅವರು ಎಲ್ಲಾ ಕೆಲಸವನ್ನೂ ಮಾಡಿದ್ದಾರೆ, ಆದರೆ ಅದಲ್ಲಿ ಇನ್ನೂ ಸ್ವಲ್ಪ ತುಸ ಕೆಲಸ ಆಗಬೇಕಾಗಿದೆ. ಇಮುವರೆಗೆ ಅದಕ್ಕೆ ೪ ಲಕ್ಷ ೧೧ ಸಾವಿರ ರೂಪಾಯಿ ಖರ್ಚಾಗಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಛಾನಲ್ ವರ್ಕ ಇನ್ನೂ ಸ್ವಲ್ಪ ಆಗಬೇಕು. ಛಾನಲ್ ವರ್ಕ್ ಎಂದರೆ ಅದರಲ್ಲಿ ರಿಲೀವಿಂಗ್ ವರ್ಕ, ಕಾರ್ಟ ಬ್ರಿಡ್ಜ್ ಮತ್ತು ಮಿಡ್‌ಪೈಪ್ ವರ್ಕ್ಸ ಇವೆಲ್ಲಾ ಸೇರಿರುತ್ತದೆ. ಅದರಲ್ಲಿ ಇಷ್ಟು ಕೆಲಸ ಆಗಬೇಕು ಈಗ ಏನಾಗಿದೆ. ಎಂದರೆ ಮೊದಲಿನ ಕಂಟ್ರಾಕ್ಟರ ಬ್ಯಾಲೆನ್ಸ ಇದ್ದ ಕೆಲಸವನ್ನು ಬಿಟ್ಟು ಬಿಟ್ಟು ಹೋಗಿದ್ದಾರೆ. ಆದುದರಿಂದ ಇದನ್ನು ಈಗ ಬೇರೆ ಏಜೆನ್ಸಿಗಾದರೂ ಕೊಟ್ಟು ಇಲ್ಲವೇ ಡಿಪಾರ್ಟಮೆಂಟ ಮೂಲಕವಾಗಿಯಾಗಲಿ ಮಾಡಿಸಿ ಆ ಜನಗಳಿಗೆ ಆದಷ್ಟು ಬೇಗ ನೀರನ್ನು ಕೊಡುತ್ತೇವೆ.

VERIFICATION OF THE SALE OF ARRACK AND TODDY

108. Sri B. SATYANARAYAN SINGH (Hospet).— Will the Chief Minister be pleased to state—

(*a*) whether the Government has any machinery to verify and ensure that only the quantity of arrack that has been released from the Goverument Depot and the quantity of toddy that the Contractor is permitted to tap from the number of trees allotted to him is being sold; if so, the details of the same; if not, whether the Goverrment would take steps to introduce a system of verification of the sale of arrack and toddy;

(*b*) the control the Government is no exercising at retail selling point of toddy and arrack, whether it is not a fact that in the absence of effective control at present at the retail selling point there is wide scope for adulterated toddy and arrack being sold and resultant loss in the revenue;

(*c*) the steps the Government has taken or propoes to take to stop this sale of adulterated toddy and arrack ?

Sri H. M. CHANNABASAPPA (Minister for Public Works and Electricity) [on behalf of Sri D. DEVARAJ URS (Chief Minister)].—

(*a*) Yes. The transport of arrack is made in sealed containers. Toddy is at present being transported from the grove to the consuming point under licence. Sealing of casks transporting toddy is not possible. However, the department is making surprise inspection to check the malpractice if any.

(*b*) The Departmental Officers make surprise inspections at the selling points. Further the tapping of toddy and transport is made under licenses issued and subject to supervision by means of tree tests and road tests. Sample are also drawn each month from the shops and chemically tested for any adulteration. The loss to Government revenue is thus prevented.

(*c*) Government are continuously reviewing the procedures in order to prevent the sale of adulterated toddy and arrack. If there is any violation of the provisions of Excise Act and Rules such violations will be dealt with severely.

ಶ್ರೀ ಬಿ. ಸತ್ಯನಾರಾಯಣ ಸಿಂಗ — ಸ್ವಾಮಿ, ಹೆಂಡವನ್ನು ಗಿಡದಿಂದ ಇಳಿಸುವ ಕಾಲಕ್ಕೆ ಅದನ್ನು ಅಸೆಸ್ ಮಾಡುವ ಕೆಲಸವನ್ನು ಕೇವಲ ಇನ್‌ಸ್ಪೆಕ್ಟರ ವರ್ಗದವರು ಮಾಡುತ್ತಾರೆ. ಅವರು ಈ ಕೆಲಸವನ್ನು ಸರಿಯಾಗಿ ಮಾಡುತ್ತಾ ಇಲ್ಲ. ಅಲ್ಲದೆ ಇದರಿಂದ ಸರ್ಕಾರಕ್ಕೆ ಬಹಳ ನಷ್ಟವಾಗುತ್ತದೆ. ಆದುದರಿಂದ ಇದನ್ನು ತಡೆಯುವದಕ್ಕೆ ಮೇಲಾಧಿಕಾರಿಗಳಿಂದ ಚೆಕ್ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.— ಹೆಂಡವನ್ನು ಇಳಿಸಿ ಅದನ್ನು ತೆಗೆದು ಕೊಂಡು ಬರುವಾಗ ಅವನು ಪರ್ಮಿಟ್ ಮೇಲೆ ತೆಗೆದುಕೊಂಡು ಬರಬೇಕು. ಆ ಪರ್ಮಿಟ್‌ನಲ್ಲಿ ಇಷ್ಟೇ ಹೆಂಡ ಇರಬೇಕು ಎಂದು ನಿಗದಿ ಮಾಡಿರುವಾಗ ಅಷ್ಟೇ ಮರ ಗಳನ್ನು ಟ್ಯಾಪ್ ಮಾಡಿದ್ದಾನೆಂದು ಪರಿಗಣಿಸಿ ಅಷ್ಟೇ ಹೆಂಡವನ್ನು ತರಬೇಕು. ಇಂತಿಷ್ಟು ಹೆಂಡ ಇರಬೇಕು ಎಂದು ಪರ್ಮಿಟ್ ಕೊಡುತ್ತಾರೆ. ಆ ಪ್ರಮಾಣದಲ್ಲಿ ಅವನು ಹೆಂಡವನ್ನು ತರುವಾಗ ದಾರಿಯಲ್ಲಿ ಕೌಂಟರ್ ಚಕ್ ಮಾಡುವುದಕ್ಕೆ ಫ್ಲೈಯಿಂಗ್ ಸ್ಕ್ವಾಡ್ ಎಕ್ಸೈಜ್ ಇನಸ್ಪೆಕ್ಟರ್ ಇರುತ್ತಾರೆ ಮೇಲ್ದರ್ಜೆ ಅಧಿಕಾರಿಗಳು ಇರುತ್ತಾರೆ. ಅವರು ಇದನ್ನು ಚಕ್ ಮಾಡುವ ವ್ಯವಸ್ಥೆ ಮಾಡಿದ್ದೇವೆ. ಆ ರೀತಿ ಚಕ್ ಮಾಡುವಾಗ ಏನಾದರೂ ಅದರಲ್ಲಿ ಲೋಪ ಬಂದಲ್ಲಿ ಅವರಿಗೆ ಉಗ್ರವಾದ ಶಿಕ್ಷೆ ಯನ್ನು ಮಾಡುತ್ತಾರೆ. ಆದರೆ ಮಾನ್ಯ ಸದಸ್ಯರಲ್ಲಿ ಇದಕ್ಕಿಂತಲೂ ಇನ್ನೂ ಉತ್ತಮ ವಾದ ಸಲಹೆ ಇದ್ದರೆ ಕೊಡಿ, ಅದನ್ನೂ ಕೂಡ ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ಸತ್ಯನಾರಾಯಣ ಸಿಂಗ್.— ಸ್ವಾಮಿ, ಬಳ್ಳಾರಿ ಜಿಲ್ಲೆಯಲ್ಲಿ ಅಡಲ್ ಟ್ರೇಷನ್ ಮಾಡಿರುವವರ ಬಗ್ಗೆ ಎಷ್ಟು ಕೇಸುಗಳನ್ನು ಹಾಕಿದ್ದೀರಿ ಮತ್ತು ಅವರು ಯಾರು ಯಾರು ಎಂದು ಹೇಳುವುದಕ್ಕಾಗುವುದಿಲ್ಲವೇ?

ಶ್ರೀ ಹೆಚ್. ಎಂ. ಚನ್ನಬಸಪ್ಪ.— ತಾವು ಬಳ್ಳಾರಿ ಸಂಬಂಧಪಟ್ಟಂಥ ಪ್ರಶ್ನೆ ಹಾಕಿದ್ದರೆ ಅದರ ಉತ್ತರವನ್ನು ಕೊಡುತ್ತಿದ್ದೆ. ಈಗ ತಾವು ಕೇಳಿರತಕ್ಕಂಥಾದ್ದು ಜನರಲ್ ಕೊಶ್ಚನ್. ಆದ್ದರಿಂದ ಆ ಬಗ್ಗೆ ಉತ್ತರ ಕೊಟ್ಟಿದ್ದೇನೆ.

ಶ್ರೀ ಟಿ. ಎಂ. ಮಂಜುನಾಥ.— ಸ್ವಾಮಿ, ಹೆಂಡ ತಯಾರು ಮಾಡುವಾಗ ಸಾಕಷ್ಟು ನೀರನ್ನು ಬೆರೆಸುತ್ತಾರೆ. ಅದು ಎಲ್ಲರಿಗೂ ಗೊತ್ತಿರುವ ವಿಚಾರ.

ಶ್ರೀ ಹೆಚ್. ಎಂ. ಚನ್ನಬಸಪ್ಪ.— ಅದು ನನಗೆ ಗೊತ್ತಿಲ್ಲ.

ಶ್ರೀ ಟಿ. ಎಂ. ಮಂಜುನಾಥ್.— ಆದರೂ ಕೂಡ ಇದು ಎಲ್ಲರಿಗೂ ಗೊತ್ತಿದೆ. ಆದುದರಿಂದ ಸರ್ಕಾರದವರು ಕಂಟ್ರಾಕ್ಟದಾರರಿಗೆ ಸ್ಪೆಸಿಫಿಕ್ ಆಗಿ ಇಂತಿಷ್ಟೇ ಪ್ರಮಾ ಣದಲ್ಲಿ ನೀರನ್ನು ಅದಕ್ಕೆ ಬೆರೆಸಬೇಕು ಎಂದು ಹೇಳುತ್ತೀರಾ? ಮತ್ತು ಸಾಮಾನ್ಯ ವಾಗಿ ಹೆಂಡಕುಡಿಯುವವರು ಬಡವರೇ. ಅವರು ಇದಕ್ಕೆ ಹಣ ಕೊಟ್ಟರೂ ಕೂಡ ಅವರಿಗೆ ಸರಿಯಾದ ರೀತಿಯಲ್ಲಿ ಕಂಟ್ರಾಕ್ಟದಾರರು ಹೆಂಡವನ್ನು ಒದಗಿಸದೇ ಹೋದರೆ ಸರ್ಕಾರ ತಂದಿರುವ ಈ ಪ್ರೊಹಿಬಿಷನ್‌ಗೆ ವಿರುದ್ಧವಾಗುವುದಿಲ್ಲವೇ? ಮತ್ತು ಈಗ ಹೆಂಡವನ್ನು ಕೆಮಿಕಲ್ ಪ್ರೊಸೆಸ್‌ನಿಂದ ಏನು ತಯಾರು ಮಾಡುತ್ತಿ ದ್ದಾರೆ ಅದಕ್ಕೆ ಎಷ್ಟು ಪರಿಸೆಂಟೇಜ ಡೈಲೂಟ ಮಾಡಬೇಕು ಎನ್ನುವುದನ್ನು ತಿಳಿಸು ತ್ತೀರಾ? ಮತ್ತು ಈ ಬಗ್ಗೆ ಏನಾದರೂ ಕೇಸುಗಳನ್ನು ಹಿಡಿದಿದ್ದೀರಾ?

ಶ್ರೀ ಹೆಚ್. ಎಂ. ಚನ್ನಬಸಪ್ಪ.— ಮಾನ್ಯ ಸದಸ್ಯರು ಹೇಳತಕ್ಕಂಥಾದು ಬರೀ ಊಹಾ ಪೋಹದಿಂದ ಹೇಳುತ್ತಿದ್ದಾರೆ. ಆದುದರಿಂದ ಅವರ ಪ್ರಿಸಂಮಷನ್ ಸರಿಯಾದುದಲ್ಲ.

ಶ್ರೀ ಎಂ. ಹೆಚ್. ಜಯಪ್ರಕಾಶನಾರಾಯಣ.— ಸ್ವಾಮಿ, ಈ ಪ್ರೊಹಿಬಿಷನ್ ಜಾರಿಗೆ ತರುವ ಸಂದರ್ಭದಲ್ಲಿ ಈ ಕಲಬೆರಕೆ ಹೆಂಡವನ್ನು ತಡೆಗಟ್ಟುವುದಕ್ಕೆ ಬಾಟಲ್ ಸೀಲ್ ಮಾಡಿಸಿ ತರುವ ವ್ಯವಸ್ಥೆ ಮಾಡುತ್ತೀವೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಈ ಮನೆಯಲ್ಲಿ ಶಿಫಾರಸು ಮಾಡಿದ್ದರು. ಅದನ್ನು ಜಾರಿಗೆ ತರುತ್ತೀರಾ?

ಶ್ರೀ ಹೆಚ್. ಎಂ. ಚನ್ನಬಸಪ್ಪ.— ಅರ್ಜಿಯನ್ನು ಸೀಲ್ ಮಾಡುವುದಕ್ಕೆ ಸಾಧ್ಯ ಇದೆ. ಆದರೆ ಹೆಂಡವನ್ನು ಸೀಲ್ ಮಾಡಿಸಿ ವುದಗಿಸಿತಕ್ಕುಂಥಾದ್ದು ಕಷ್ಟ. ಒಂದು ವೇಳೆ ಈ ವಿಚಾರದಲ್ಲಿ ಮಾನ್ಯ ಸದಸ್ಯರು ಒಂದು ಕಾಂಕ್ರೀಟ ಸಜೆಷನ್ ಕೊಟ್ಟು ಈ ರೀತಿ ಮಾಡಬೇಕು ಎಂದು ಹೇಳಿದರೆ ಅವರ ಆ ಸಲಹೆಯನ್ನು ನಾನು ವಿಶ್ವಾಸದಿಂದ ವಿಚಾರ ಮಾಡುತ್ತೇನೆ.

ಶ್ರೀ ಎನ್. ಎಚ್. ಪುಟ್ಟರಂಗನಾಥ.— ಕಲಬೆರಕೆ ಹೆಂಡವನ್ನು ಮಾರುತ್ತ ಇದ್ದಾರೆ ಎನ್ನುವುದು ಸರಕಾರದ ಗಮನಕ್ಕೆ ಬಂದಿಲ್ಲವೆ? ಹೆಂಡ ತಯಾರು ಮಾಡುವಾಗ ಅಂಟುವಾಳದ ಕಾಯಿಗಳನ್ನು ಸೇರಿಸಿ ತಯಾರು ಮಾಡುವದರಿಂದ ಆದನ್ನು ಉಪಯೋಗ ಮಾಡುತ್ತಿರುವ ಜನಗಳಿಗೆ ನಾನಾ ರೀತಿ ಕಾಯಿಲೆಗಳು ಬರುತ್ತಿವೆ ಯೆಂದು ಡಾಕ್ಟರು ತಿಳಿಸಿರುವುದು ಸರಕಾರದ ಗಮನಕ್ಕೆ ಬಂದಿಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೆಂಡವನ್ನು ಕಲಬೆರಕೆ ಮಾಡುತ್ತಾರೆನ್ನುವುದು ಸರಕಾರದ ಗಮನಕ್ಕೆ ಬಂದಿದೆ. ಆದುದರಿಂದಲೇ ಅದನ್ನು ಪರಿಶೀಲಿಸಬೇಕೆಂದು ಅದಕ್ಕೆ ಸಾಕಷ್ಟು ವ್ಯವಸ್ಥೆ ಮಾಡಿ ಅದನ್ನು ತಪ್ಪಿಸಲಿಕ್ಕಾಗಿ ಈಗ ಈ ವ್ಯವಸ್ಥೆ ಮಾಡಿರುವುದು. ಇನ್ನು ಯಾವುದಾದರೂ ಹೆಚ್ಚಿನ ವ್ಯವಸ್ಥೆ ಮಾಡುವ ಬಗ್ಗೆ ಮಾನ್ಯ ಸದಸ್ಯರು ಸರಕಾರಕ್ಕೆ ತಿಳಿಸಿದರೆ ಅದನ್ನು ಅಗತ್ಯವಾಗಿ ಆಲೋಚನೆ ಮಾಡೋಣ.

ಶ್ರೀ ಎಚ್. ಎಸ್. ಸಿದ್ದಪ್ಪ.—ಹಿಂದೆ ಒಂದು ಸಾರಿ ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಒಂದು ಪ್ರಯೋಗಾಲಯವನ್ನು ಮಂಗಳೂರಿನಲ್ಲಿ ರಚನೆ ಮಾಡುತ್ತಿದ್ದಾರೆ. ಅದು ಯಶಸ್ವಿಯಾಪರೆ ರಾಜ್ಯಾದ್ಯಂತ ಅಂಥ ಪ್ರಯೋಗಾಲಯವನ್ನು ಕೊಡುತ್ತೇವೆ ಎಂದು ಹೇಳಿದ್ದರು. ಅದು ಯಾವ ಹಂತದಲ್ಲಿದೆ ಮತ್ತು ಅದರಿಂದ ಒಳ್ಳೆಯ ಪ್ರಯೋಜನ ಇದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸದ್ಯದೆಲ್ಲಿ ನನ್ನಲ್ಲಿ ಆ ಬಗ್ಗೆ ಮಾಹಿತಿಗಳು ಇಲ್ಲ. ಅದರ ಬಗ್ಗೆ ಮಾಹಿತಿ ಬೇಕಾದರೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಒದಗಿಸುತ್ತೇನೆ.